<u>ದಿನಾಂಕಃ **28-11-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆ ಃ ಡಿಕ್ರಿದಾರರ ಪರ ಶ್ರೀ ಬಿ ಸಿ ವಿ ಎಸ್ ವಕೀಲರಿಂದಃ</u>

ನಿಆರ್ 1 ರಲ್ಲಿ ಅಕ್ಟೋಬರ್ 2018 ರಿಂದ ಆಗಸ್ಟ್ 2019 ರವರೆಗೆ ರಮಿಟ್ಟೆನ್ಸ್ ಬಾಕಿ ಇರುತ್ತದೆ ಎಂದು ಹೇಳಿರುತ್ತೇನೆ. ಟಿ.ಸಿ.ಎಸ್ ಸಂಸ್ಥೆಯವರು ಯಾವ ವರ್ಷ ರೆಮಿಟ್ಟೆನ್ಸ್ ಮಾಡಿರುವುದಿಲ್ಲ ಎಂದು ದೂರು ನೀಡಿದ್ದು ಅದನ್ನು ಅಕ್ಟೋಬರ್ 2018 ರಿಂದ ಆಗಸ್ಟ್ 2019 ರ ಅವಧಿಗೆ ಮಾಡಿರಬಹುದು. ಕಲಂ 409 ಭಾ.ದಂ.ಸಂ ಅಪರಾಧವನ್ನು ಯಾವ ಠಾಣೆಯಲ್ಲಿ ದೂರುನ್ನು ದಾಖಲಿಸಿರುತ್ತೇನೆ ಎಂದು ನನಗೆ ಹೇಳಲು ಬರುವುದಿಲ್ಲ. ಟಿ ಸಿ ಎಸ್ ಸಂಸ್ಥೆಯ ವಿರುದ್ಧ ಕಲಂಃ 7(ಎ) ಹಾಗೂ 14 ರಲ್ಲಿ ಯಾವುದೇ ಪ್ರಕರಣ ಬಾಕಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಕಲಂಃ 11 applicable ಆಗಬೇಕಾದರೆ ಕಲಂಃ 7(ಎ) ಮತ್ತು 14 ನಾವು ಕಾಂಪ್ಲೆ ಮಾಡಿರಬೇಕು ಎಂದರೆ ಸರಿ. ಕಲಂಃ 8(ಜಿ) applicable ಆಗಬೇಕಾದರೆ ಕಲಂಃ 7(ಎ) ಮತ್ತು 14 ನಾವು ಕಾಂಪ್ಲೆ ಮಾಡಿರಬೇಕು ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಟಿ.ಸಿ.ಎಸ್ ಸಂಸ್ಥೆಯವರು ಎಷ್ಟು ಮೊತ್ತ ರೆಮಿಟ್ಟೆನ್ಸ್ ಮಾಡುವುದು ಬಾಕಿ ಇದೆ ಎಂದು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಕ್ಟೋಬರ್ 2018 ರಿಂದ ಏಪ್ರಿಲ್ 2020 ರವರೆಗೆ ಸುಮಾರು ರೂ.66,69,721/- ಟಿ.ಸಿ.ಎಸ್ ಸಂಸ್ಥೆಯವರು ರೆಮಿಟ್ಟೆನ್ಸ್ ಮಾಡುವುದು ಬಾಕಿ ಇರುತ್ತದೆ. ಈ ರೀತಿ ಬಾಕಿ ಇರುವ ಬಗ್ಗೆ 7 (ಎ) ರಲ್ಲಿ ನಮೂದು ಇರುತ್ತದೆ.

2. 7(ಎ) ನೋಟೀಸು ಕೊಡುವ ಪೂರ್ವದಲ್ಲಿ ಕೊನೆಯದಾಗಿ ಯಾವಾಗ ಟಿ.ಸಿ.ಎಸ್ ಸಂಸ್ಥೆಗೆ ಭೇಟಿ ನೀಡಿದ್ದೇನೆ ಎಂದರೆ ನೆನಪಿರುವುದಿಲ್ಲ. 8(ಜಿ) ಕೊಡುವ ಪೂರ್ವದಲ್ಲಿ ಅಥವಾ ನಂತರದಲ್ಲಿ ಸದರಿ ಸಂಸ್ಥೆಗೆ ಭೇಟಿ ನೀಡಿದ ಬಗ್ಗೆ ನನಗೆ ನೆನಪಿರುವುದಿಲ್ಲ. ನಾವು ಕಲಂಃ 7(ಎ) ಮತ್ತು 14 ನ್ನು ಕಂಪ್ಲೀ ಮಾಡದ ಕಾರಣ ಕಲಂ 11 ರಡಿ ನಾವು ಪ್ರಥಮಾ ಆಧ್ಯತೆ ನೀಡುವಂತೆ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾವು ಈ ಕಾಯ್ದೆಯ applicability ಅನ್ನು ತೀರ್ಮಾನ ಮಾಡಿಕೊಳ್ಳದೇ ಯಾರ ವಿರುದ್ಧ ಹಾಗೂ ಸಂಸ್ಥೆಯ ವಿರುದ್ಧ ಸಹ ಫ್ರಾಸಿಕ್ಯೂಶನ್ ಗೆ ಒಳಪಡಿಸಲು ಬರುವುದಿಲ್ಲ ಎಂದರೆ ಸರಿ.

ಯಾವುದೇ ಸಂಸ್ಥೆ ಮುಚ್ಚಿದ ನಂತರ ಆ ಸಂಸ್ಥೆಯ ವಿರುದ್ಧ ನಾವು ಹಣ ಪಾವತಿಸುವಂತೆ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಒಂದು ಸಂಸ್ಥೆ ಮುಚ್ಚಿದ್ದ ನಂತರ ಸದರಿ ಸಂಸ್ಥೆಯ ಪ್ರಾವಿಡೆಂಟ್ ಫಂಡನ್ನು ರೆಮಿಟ್ಟೆನ್ಸ್ ಮಾಡುವಂತೆ ಕೇಳಲು ಬರುವುದಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು 7(ಕ್ಯೂ) ಇಂಟೆರಸ್ಟ್ ಅನ್ನು ಕೇಳಬಹುದು ಎಂದು ಉತ್ತರಿಸುತ್ತಾರೆ. 7(ಕ್ಯೂ) ಇಂಟರೆಸ್ಟ್ ಅನ್ನು ಸಂಸ್ಥೆ ಮುಚ್ಚಿದ್ದ ನಂತರ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

3. ನಿಆರ್-2 ರ ನಂತರ ಜಾರಿ ಅಧಿಕಾರಿಗಳು ಯಾವುದೇ ಆದೇಶ ಇರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. 2021 ರ ನಂತರ ನಮ್ಮ ಸಂಸ್ಥೆಯವರು 7(ಎ) ಕೇಳಗೆ ಯಾವುದೇ ಆದೇಶ ಮಾಡಿರುವುದಿಲ್ಲ ಎಂದರೆ ಸರಿ. ನಿಆರ್ 2 ರಲ್ಲಿ ನಮ್ಮ ಹಿಂದಿನ ಜಾರಿ ನಿರ್ದೇಶನ ಅಧಿಕಾರಿಗಳು ಟಿ.ಸಿ.ಎಸ್ ಸಂಸ್ಥೆ ಮುಚ್ಚಿರುವ ಬಗ್ಗೆ ನಮೂದು ಮಾಡಿರುತ್ತಾರೆ ಎಂದರೆ ಸರಿ. ನಿಆರ್ 2 ರಲ್ಲಿ ಈಗಾಗಲೇ ಸಂಸ್ಥೆ ಮುಚ್ಚಿದೆ ಎಂದು ಹೇಳಿದ ಮೇಲೆ ನಾವು ಕಲಂ 7(ಎ) ಮತ್ತು 14 ರಲ್ಲಿ ಪ್ರಾವಿಡೆಂಟ್ ಫಂಡನ್ನು ಕೇಳಲು ಬರುವುದಿಲ್ಲ ಎಂದರೆ ಸರಿ ಸಾಕ್ಷಿ ಕಲಂ 14 ರಲ್ಲಿ ಕೇಳಲು ಬರಬಹುದು ಎಂದು ಉತ್ತರಿಸುತ್ತಾರೆ. ಕಲಂಃ 14 ರಲ್ಲಿ ತಡವಾಗಿ ಪೇಮೆಂಟ್ ಮಾಡಿದರೆ ಡ್ಯಾಮೇಜಸ್ ಕೇಳಬಹುದು ಎಂದು ಇರುತ್ತದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲೆಗಳ ಪ್ರಕಾರ ರೂ.32,39,833/- ಡ್ಯಾಮೇಜ್ ಮೊತ್ತವನ್ನು ಅಕ್ಟೋಬರ್ 2018 ರಿಂದ ಏಪ್ರೀಲ್ 2020 ರ ಅವಧಿಗೆ ಕೇಳಿರುತ್ತೇವೆ. ಏಪ್ರೀಲ್ 2020 ರವರೆಗೆ ಕಲಂ 7(ಎ) ಕೆಳಗೆ ರೂ.16,27,343/- ಬಾಕಿ ಇತ್ತು. ಸೆಪ್ಟೆಂಬರ್ 2019 ರಿಂದ ಏಪ್ರೀಲ್ 2020 ರವರಗೆ ಕಾಂಟ್ರಿಬ್ಯೂಷನ್ ಬಾಕಿ ಇದ್ದಾಗ ನಾವು ಆ ವರ್ಷದ ರೆಮಿಟ್ಟೆನ್ಸ್ ಅನ್ನು ಪಾವತಿ ಮಾಡುವಂತೆ ನೋಟೀಸು ಕೊಡುತ್ತೇವೆ ಎಂದರೆ ಸಾಕ್ಷಿ ಆ ರೀತಿ ಇರುವುದಿಲ್ಲ ಎಂದು ಉತ್ತರಿಸುತ್ತಾರೆ.

4. ಮೇ 2020 ರಿಂದ ಜುಲೈ 2021 ರವರೆಗೆ ಟಿ ಸಿ ಎಸ್ ಸಂಸ್ಥೆಯವರು ಕೇವಲ ರೂ.500/- ಕಾಂಟ್ರಿಬ್ಯೂಷನ್ ಮಾತ್ರ ಕಟ್ಟಬೇಕೆಂದು ಬೇರೆ ಯಾವುದೇ ಬಾಕಿ ಇರುವುದಿಲ್ಲ ಎಂದರೆ ಸರಿ. ನಾನು ಡಿಕ್ರಿದಾರರು ಕ್ಲೈಮ್ ಮೊತ್ತವನ್ನು ಪಡೆಯಬಾರದು ಎಂಬ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಟಿ.ಸಿ.ಎಸ್ ಸಂಸ್ಥೆಯಿಂದ ಎಂಪ್ಲಾಯಿ ಕಾಂಟ್ರಿಬ್ಯೂಷನ್ ಗೆ ಎಷ್ಟು ಮೊತ್ತ

ಬರಬೇಕು ಎನ್ನುವ ಬಗ್ಗೆದಾಖಲೆಯನ್ನು ಹಾಜರುಪಡಿಸದೇ ನಮಗೆ ಪ್ರಥಮ ಆದ್ಯತೆ ನೀಡಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಲಂಃ7(ಎ) ಮತ್ತು 14 ರಡಿ ಪ್ರತಿ 3 ತಿಂಗಳಿಗೊಮ್ಮೆ ನೋಟೀಸ್ ನೀಡದೇ ಅವರ ವಿರುದ್ಧ ಅವರ ವಿರುದ್ಧ ಸುಳ್ಳು ಕ್ಲೈಮ್ ಹೇಳುತ್ತಾ ಇದ್ದೇವೆ ಎಂದರೆ ಸರಿಯಲ್ಲ. ಡಿಕ್ರಿದಾರರು ಎದುರುದಾರರಿಂದ ಹಣ ವಸೂಲು ಮಾಡಲು ಹಕ್ಕು ಉಳ್ಳವರು ಆಗಿದ್ದರೂ ಸಹ ನಾವು ಕಲಂಃ 11 ರಡಿ ಕ್ಲೈಮ್ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಅಬ್ಜೆಕ್ಟರ್ ಪರವಾಗಿ ಶ್ರೀ ಹೆಚ್ ಎನ್ ವಿ ವಕೀಲರಿಂದಃ</u>

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಪ್ಯಾರಾ ನಂ. 5 ರಲ್ಲಿ ನಮೂದಿಸಿದ ಸ್ವತ್ತಿನ ಮೇಲೆ ನಾವು ಕ್ಲೈಮ್ ಮಾಡುತ್ತಿದ್ದೇವೆ ಎಂದರೆ ಸಾಕ್ಷಿ ಇಲ್ಲ ನಮಗೆ ಎಲ್ಲಾ ಹಣ ಬರಬೇಕು ಎಂದು ಉತ್ತರಿಸುತ್ತಾರೆ. ಮಾನ್ಯ ಜಿಲ್ಲಾ ಅಧಿಕಾರಿಗಳ ಆದೇಶ ಸಂಖ್ಯೆ 15/2020-21 ರಲ್ಲಿ ಸರ್ವೆ ನಂಬರ್ 97 ರಲ್ಲಿ 1 ಎಕರೆ 10 ಗುಂಟೆ ಕೆಸವೇ ಗ್ರಾಮದ ಆಸ್ತಿ ಶ್ರೀರಾಮ್ ಫೈನಾನ್ಸ್ ಗೆ ದಿನಾಂಕ 17.05.2021 ರಂದು ಸ್ವಾಧೀನ ನೀಡಲಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಸಂಸ್ಥೆಯವರು ನಮಗೆ ಹಣವನ್ನು ಕೊಡಬೇಕು ಆಸ್ತಿಯನ್ನು ಮಾಡಿ ಮೊದಲ ಪ್ರಾಶಸ್ತ್ಯ ನಮಗೆ ಕೊಡಬೇಕು ಎಂದು ನಾವು ಬಂದಿರುತ್ತೇವೆ ಎಂದು ಉತ್ತರಿಸುತ್ತಾರೆ. ಶ್ರೀರಾಮ್ ಫೈನಾನ್ಸ್ ನವರು ನಮಗೆ ಯಾವುದೇ ಹಣವನ್ನು ಕಟ್ಟುವುದು ಬಾಕಿ ಇರುವುದಿಲ್ಲ ಎಂದರ ಸರಿ ಸಾಕ್ಷಿ ಮುಂದುವರೆದು ಆದರೆ ಆಸ್ತಿಯ ಮೇಲೆ ನಮಗೆ ಅಧಿಕಾರ ಇರುತ್ತದೆ ಎಂದು ಉತ್ತರಿಸುತ್ತಾರೆ. ಶ್ರೀರಾಮ್ ಫೈನಾನ್ಸ್ ನವರಿಗೆ ಹೊರತುಪಡಿಸಿ ಬೇರೆ ಯಾರಿಗೆ ಸದರಿ ಆಸ್ತಿಯಲ್ಲಿ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೊದಲ ಪ್ರಾಶಸ್ತ್ಯ ನಮಗೆ ಇರುತ್ತದೆ ಎಂದು ಉತ್ತರಿಸುತ್ತಾರೆ. ನಮ್ಮ ಸಂಸ್ಥೆಯವರು ಜಿಲ್ಲಾಧಿಕಾರಿಗಳ ಆದೇಶವನ್ನು ಸಮಕ್ಷಮ ನ್ಯಾಯಿಕ ಪ್ರಾಧಿಕಾರದ ಮುಂದೆ ಮೇಲ್ಮನವಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಶ್ರೀರಾಮ್ ಫೈನಾನ್ಸ್ ನವರು ಸದರಿ ಆಸ್ತಿಯ ಸ್ವಾಧೀನ ಪಡೆಯುವ ಪೂರ್ವದಲ್ಲಿ ನಮ್ಮ ಸಂಸ್ಥೆಯವರು ಸದರಿ ಆಸ್ತಿಯ ಸಂಬಂಧ ಹಕ್ಕು ಕೋರಿ ಯಾವುದೇ ದಾವೆ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

2.ನಾನು ಈ ಪ್ರಕರಣದಲ್ಲಿ ಹಾಜರಾದ ನಂತರ ಜಿಲ್ಲಾಧಿಕಾರಿಗಳ ಆದೇಶವನ್ನು ಪ್ರಶ್ನೆ ಮಾಡಿ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾನು ಅಪೂರ್ಣ ಮಾಹಿತಿಯೊಂದಿಗೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ವಿಚಾರಗಳು ಗೊತ್ತಿಲ್ಲದೇ ಇದ್ದರೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಜೆ ಡಿ ಆರ್ 1 ರಿಂದ 11 ರ ಪರವಕೀಲರು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ